**ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ.ನಂ.3404-2023**

ಹೆಸರು : ಅನುಷಾ ಬೈಟಿಪುಲಿ
ತಂದೆ ಹೆಸರು : ಬಣ್ಣಪ್ಪ ಬೈಟಿ
ವಯಸ್ಸು : 29
ಉದ್ಯೋಗ : ಗೃಹಿಣಿ
ವಾಸ :ಚಿಕ್ಕಜಾಲಾ

ಸಿಡಬ್ಲೂ-1, ಪಿಡಬ್ಲೂ-1
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 23-06-2026

**<u>ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ</u>**

ಚಾಸಾ 2 ಮತ್ತು ಚಾಸಾ 3 ರವರು ಪರಿಚಯ ಇದ್ದಾರೆ. ಚಾಸಾ 4 ನನ್ನ ತಂದೆ, ಚಾಸಾ 5 ನನ್ನ ತಾಯಿ. ಚಾಸಾ6 ರಿಂದ 10 ರವರ ಪರಿಚಯ ಇದೆ. ಆರೋಪಿಗಳ ಪರಿಚಯ ಇದೆ. ಆರೋಪಿ ಮತ್ತು ನಾನು ಈ ಹಿಂದೆ ಪತಿ ಪತ್ನಿಯರಾಗಿದ್ದು ನ್ಯಾಯಾಲಯದಲ್ಲಿ ಪರಸ್ಪರ ವಿಚ್ಚೇದನ ಪಡೆದುಕೊಂಡಿರುತ್ತೇವೆ. ಆರೋಪಿ ನನಗೆ ಯಾವುದೇ ದೈಹಿಕ ಮಾನಸಿಕ ಹಿಂಸೆ ನೀಡಿರುವುದಿಲ್ಲ. ಆರೋಪಿ ನನಗೆ ಯಾವುದೇ ಹಲ್ಲೆ ಮಾಡಿಲ್ಲ ಕೊಲೆ ಬೆದರಿಕೆ ಹಾಕಿಲ್ಲ. ಆರೋಪಿ ನನಗೆ ಯಾವುದೇ ವರದಕ್ಷಿಣೆ ತರುವಂತೆ ಕಿರುಕುಳ ನೀಡಿರುವುದಿಲ್ಲ. ಈಗ ಸುಮಾರು ವರ್ಷಗಳ ಹಿಂದೆ ಪೋಲಿಸ್ ಠಾಣೆಗೆ ಹೋಗಿದ್ದಾಗ ಪೋಲಿಸರು ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮಹಜರನ್ನು ನೋಡಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಮುಂದೆ ಯಾವುದೇ ಮಹಜರು ಮಾಡಿಲ್ಲ. ಸಾಕ್ಷಿಗ ಕಡತದಲ್ಲಿರುವ ವಿವಾಹ ಆಮಂತ್ರಣ ಪತ್ರಿಕೆಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಕೋರಿಧ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುವ ಕಾರಣ ಮಾನ್ಯ ಎಪಿಪಿರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜರಿಂದಃ

ನಾನು ಆರೋಪಿಯನ್ನು ಮದುವೆಯಾದ ನಂತರ ಆರೋಪಿ ನನಗೆ ಸಣ್ಣ ಪುಟ್ಟ ವಿಚಾರಗಳಿಗೆ ಗಲಾಟೆ ಮಾಡುತ್ತಾ ನನ್ನನ್ನು ಹಿಯಾಳಿಸಿ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಪಿ ನನಗೆ ವರದಕ್ಷಿಣೆ ಹಣ ತರುವಂತೆ ಒತ್ತಾಯ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಂತರ ಆರೋಪಿಯು ಮನೆಯನ್ನು ಬಾಡಿಗೆಗೆ ಮನೆ ಮಾಡಿ ಕೊಡವಂತೆ ಬೇಡಿಕೆ ಇಟ್ಟಿದ್ದು ಅದರಂತೆ ನನ್ನ ತಂದೆ ವಿದ್ಯಾನಗರ ಕ್ರಾಸ್ನಲ್ಲಿ 6 ಲಕ್ಷ ರೂಪಾಯಿ ಕೊಟ್ಟು ಮನೆಯನ್ನು ಬೋಗ್ಯಕ್ಕೆ ಹಾಕಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪುನಃ ಆರೋಪಿ ಹಿಂಸೆ ನೀಡಿದ್ದರಿಂದ ನನ್ನ ತಂದೆ ಹೆಚ್ಚಿನ ವರದಕ್ಷಿಣೆಯಾಗಿ 2 ಲಕ್ಷ ರೂಪಾಯಿಯನ್ನು ಆರೋಪಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸಹ ಆರೋಪಿ ಇನ್ನೂ ಹೆಚ್ಚಿನ ವರದಕ್ಷಿಣೆ ಹಣವನ್ನು ತರುವಂತೆ ನನಗೆ ಹಿಂಸೆ ನೀಡಿದ್ದು ಅದಕ್ಕೆ ನಾನು ಒಪ್ಪದಿದ್ದಾಗ ದಿ.24-08-2021 ರಂದು ಆರೋಪಿ ನನಗೆ ಕೈಯಿಂದ ಹೊಡೆದು ಹೆಚ್ಚಿನ ವರದಕ್ಷಿಣೆ ಹಣ ತರದೇ ಇದ್ದರೆ ನನ್ನನ್ನು ಸಾಯಿಸುವುದಾಗಿ ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನಿಪಿ-1 ರಂತೆ ಪೋಲಿಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪೋಲಿಸರು ದಿ.01-06-2023 ರಂದು ನಾನು ಮತ್ತು ಆರೋಪಿ ವಾಸವಿದ್ದ ಮನೆಗೆ ಬಂದಿದ್ದು, ನಾನು ಸ್ಥಳ ತೋರಿಸಿದ ಮೇರೆಗೆ ಬೆಳಗ್ಗೆ 10.30 ರಿಂದ 12.00 ಗಂಟೆ ವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ-2 ಕ್ಕೆ ಸ್ಥಳದಲ್ಲೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ರಾಜೀ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆ ಕಾರಣದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ದೇವನಹಳ್ಳಿ

**ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**
**ಸಿ.ಸಿ.ನಂ.3404-2023**

ಹೆಸರು : ಬಣ್ಣಪ್ಪ ಬೈಟಿ ಪುಲಿ
ತಂದೆ ಹೆಸರು : ನರಸಪ್ಪ
ವಯಸ್ಸು : 56
ಉದ್ಯೋಗ : ವೈದ್ಯರು
ವಾಸ :ಚಿಕ್ಕಜಾಲಾ

ಸಿಡಬ್ಲ್ಯೂ-4, ಪಿಡಬ್ಲ್ಯೂ-2
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 23-06-2026

**ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ**

ಚಾಸಾ 1 ನನ್ನ ಮಗಳು. ಚಾಸಾ 5 ನನ್ನ ಹೆಂಡತಿ. ಚಾಸಾ6 ರಿಂದ 10 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಆರೋಪಿ ಮತ್ತು ನನ್ನ ಮಗಳು ಈ ಹಿಂದೆ ಪತಿ ಪತ್ನಿಯರಾಗಿದ್ದು ನ್ಯಾಯಾಲಯದಲ್ಲಿ ಪರಸ್ಪರ ವಿಚ್ಛೇದನ ಪಡೆದುಕೊಂಡಿರುತ್ತಾರೆ . ಆರೋಪಿ ತನಗೆ ಯಾವುದೇ ವರದಕ್ಷಿಣೆ ತರುವಂತೆ ದೈಹಿಕ ಮಾನಸಿಕ ಹಿಂಸೆ ನೀಡಿದ ಬಗ್ಗೆ ನನಗೆ ನನ್ನ ಮಗಳು ಯಾವುದೇ ಮಾಹಿತಿ ನೀಡಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಕೋರಿದ್ಧು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುವ ಕಾರಣ ಮಾನ್ಯ ಎಪಿಪಿರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜರಿಂದಃ

ಚಾಸಾ 1 ರವರು ಆರೋಪಿಯನ್ನು ಮದುವೆಯಾದ ನಂತರ ಆಸರೋಪಿ ಚಾಸಾ 1 ಸಣ್ಣ ಪುಟ್ಟ ವಿಚಾರಗಳಿಗೆ ಗಲಾಟೆ ಮಾಡುತ್ತಾ ಚಾಸಾ 1 ರವರನ್ನು ಹಿಯಾಳಿಸಿ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ಚಾಸಾ 1 ರವರಿಗೆ ವರದಕ್ಷಿಣೆ ಹಣ ತರುವಂತೆ ಒತ್ತಾಯ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಂತರ ಆರೋಪಿಯು ಮನೆಯನ್ನು ಬಾಡಿಗೆಗೆ ಮನೆ ಮಾಡಿ ಕೊಡವಂತೆ ಬೇಡಿಕೆ ಇಟ್ಟಿದ್ದು ಅದರಂತೆ ನಾನು ವಿಧ್ಯಾನಗರ ಕ್ರಾಸ್ನಲ್ಲಿ 6 ಲಕ್ಷ ರೂಪಾಯಿ ಕೊಟ್ಟು ಮನೆಯನ್ನು ಬೋಗ್ಯಕ್ಕೆ ಹಾಕಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪುನಃ ಆರೋಪಿ ಹಿಂಸೆ ನೀಡಿದ್ದರಿಂದ ನಾನು ಹೆಚ್ಚಿನ ವರದಕ್ಷಿಣೆಯಾಗಿ 2 ಲಕ್ಷ ರೂಪಾಯಿಯನ್ನು ಆರೋಪಿಗೆ

ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಸಹ ಆರೋಪಿ ಇನ್ನೂ ಹೆಚ್ಚಿನ ವರದಕ್ಷಿಣೆ ಹಣವನ್ನು ತರುವಂತೆ ಚಾಸಾ 1 ರವರಿಗೆ ಹಿಂಸೆ ನೀಡಿದ್ದು ಅದಕ್ಕೆ ಅವರು ಒಪ್ಪದಿದ್ದಾಗ ದಿ.24-08-2021 ರಂದು ಆರೋಪಿ ಚಾಸಾ 1 ರವರಿಗೆ ಕೈಯಿಂದ ಹೊಡೆದು ಹೆಚ್ಚಿನ ವರದಕ್ಷಿಣೆ ಹಣ ತರದೇ ಇದ್ದರೆ ನಿನ್ನನ್ನು ಸಾಯಿಸುವುದಾಗಿ ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ 1 ರವರು ನಿಪಿ-1 ರಂತೆ ಪೋಲಿಸರಿಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ದಿ.01-06-2023 ರಂದು ಈಗ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ಕಾರಣದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ